ಇದೊಂದು ಕೆಟ್ಟ ಸಂಪ್ರದಾಯವಾಗುವುದು ಬೇಡ. ಕೃಷಿ ವಿಶ್ವವಿದ್ಯಾನಿಲಯಗಳು ಯಾವಾಗಲೂ ಮಾನ್ಯ ಕೃಷಿ ಖಾತೆ ಸಚಿವರ ಅಧೀನದಲ್ಲೇ ಬರುತ್ತವೆ.

ಅಧ್ಯಕ್ಷರು :— ಪಶುಸಂಗೋಪನಾ ಕುರಿತ ವಿಷಯ ಇದರಲ್ಲಿದೆ. ಮಾನ್ಯ ಪಶುಸಂಗೋಪನಾ ಸಚಿವರು ಅವರ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರಿಸಲಿ ಬಿಡಿ.

ಶ್ರೀ ಬಿ.ಬಿ. ನಿಂಗಯ್ಯ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಡಿಪ್ಲೋಮಾ ಮತ್ತು ಜಿ.ಓ.ಸಿ. ಕೋರ್ಸ್‌ಗಳನ್ನು ಆರಂಭಿಸಬೇಕೆಂಬ ಒಂದು ಒಳ್ಳೆಯ ಸಲಹೆಯನ್ನು ಸರ್ಕಾರಕ್ಕೆ ನೀಡಿದ್ದಾರೆ. ಸರ್ಕಾರ ಆ ವಿಚಾರವನ್ನು ಪರಿಶೀಲನೆ ಮಾಡುತ್ತದೆ ಎಂದು ನಾನು ತಿಳಿಸಬಯಸುತ್ತೇನೆ. ವಿಶ್ವವಿದ್ಯಾನಿಲಯದ ಪ್ರೋ-ಚಾನ್ಸಲರ್ ಆದ ಹಾಗೂ ಹಿರಿಯ ಸಚಿವರಾಗಿರತಕ್ಕ ಮಾನ್ಯ ಬೈರೇಗೌಡರ ಜೊತೆಯಲ್ಲಿ ನಾನು ಈ ವಿಚಾರವಾಗಿ ಮಾತನಾಡಿ ಆದಷ್ಟು ಬೇಗ ಈ ಕೋರ್ಸ್‌ಗಳನ್ನು ತೆರೆಯುವುದರ ಬಗ್ಗೆ ಆಲೋಚನೆ ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್ :— ಮಾನ್ಯ ಅಧ್ಯಕ್ಷರೇ, ನಾನು ಪಶು ಸಂಗೋಪನಾ ವಿಶ್ವವಿದ್ಯಾನಿಲಯವನ್ನು ತೆರೆಯುವುದರ ಬಗ್ಗೆ ಕೂಡ ಕೇಳಿದ್ದೆ. ಅದರ ಬಗ್ಗೆ ಸಂಬಂಧಿಸಿದ ಮಂತ್ರಿಗಳು ಚಿಂತನೆ ಮಾಡಿದ್ದಾರೆಯೇ?

ಅಧ್ಯಕ್ಷರು :— ಮಾನ್ಯ ಬೆಲ್ಲದ್‌ರವರೇ, ತಾವು ಆಮೇಲೆ ಸ್ವಲ್ಪ ನನ್ನ ಕೊಠಡಿಗೆ ಬನ್ನಿ, ನನಗೆ ಈ ವಿಷಯ ಬಹಳ ಇಷ್ಟವಾದುದು. ನಾವಿಬ್ಬರೂ ಇದರ ಬಗ್ಗೆ ಚರ್ಚೆ ಮಾಡೋಣ.

ರಾಜ್ಯದಲ್ಲಿ ಆಶ್ರಯ ಯೋಜನೆ.

49(571) ಶ್ರೀ ಬಿ. ಶಿವರಾಮು (ಗಂಡಸಿ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಆಶ್ರಯ ಯೋಜನೆಯ ಮನೆಗಳನ್ನು ತಾಲ್ಲೂಕ್‌ವಾರು ಅಥವಾ ಕ್ಷೇತ್ರವಾರು ಹಂಚಲಾಗುವುದೇ;

ಆ) ಮನೆ ಹಂಚಿಕೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ತಾಲ್ಲೂಕುವಾರು ಹಾಗೂ ಕ್ಷೇತ್ರವಾರು ಹಂಚಲಾಗಿದೆ.

ಆ) ಬೇಡಿಕೆ ಆಧಾರದ ಮೇಲೆ ಕೆಲವು ತಾಲ್ಲೂಕು ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ಹೆಚ್ಚಿನ ಮನೆಗಳನ್ನು ಹಂಚಿಕೆ ಮಾಡಲಾಗಿದೆ.

ಇ) ಕಡಿಮೆ ಮನೆಗಳ ಗುರಿಯನ್ನು ಕೊಟ್ಟಿರುವ ವಿಧಾನಸಭಾ ಕ್ಷೇತ್ರಗಳಿಗೆ ಹೆಚ್ಚುವರಿಯಾಗಿ ಮನೆಗಳ ಗುರಿ ಕೊಡಲು ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು :— ಮಾನ್ಯ ವಸತಿ ಸಚಿವರು ಕೇಂದ್ರ ವಸತಿ ಸಚಿವರ ಜೊತೆಗೆ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಬೇಕಾಗಿರುವುದರಿಂದ ಮೊದಲು ಮಾನ್ಯ ವಸತಿ ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ತೆಗೆದುಕೊಳ್ಳೋಣ. ಮಾನ್ಯ ಡಿ.ಆರ್. ಪಾಟೀಲ್‌ರವರೇ, ತಮ್ಮ ಪ್ರಶ್ನೆ ಮತ್ತು ಮಾನ್ಯ ಶಿವರಾಮುರವರ ಪ್ರಶ್ನೆಗಳನ್ನು ಕಂಬೈನ್ ಮಾಡಲಾಗಿದೆ. ತಮ್ಮ ಪ್ರಶ್ನೆಗೆ ಉತ್ತರ ನೀಡಲು ಇಡೀ ರಾಜ್ಯದ ಡೀಟೈಲ್ಸ್ ಕಲೆಕ್ಟ್ ಮಾಡಬೇಕಾಗುತ್ತದೆ. ಈಗ 19 ಜಿಲ್ಲೆಗಳಿಂದ ಮಾಹಿತಿ ಬಂದಿದೆ, ಇನ್ನು ಉಳಿದ ಜಿಲ್ಲೆಗಳಿಂದ ಇನ್ನೂ ಮಾಹಿತಿ ಬಂದಿಲ್ಲವೆಂದು ಮಾನ್ಯ ವಸತಿ ಸಚಿವರು ನನಗೆ ದಾಖಲೆಗಳನ್ನು ತೋರಿಸಿದರು. ಆದುದರಿಂದ ತಮ್ಮ ಪ್ರಶ್ನೆಗೆ ಉತ್ತರಿಸಲು ಸ್ವಲ್ಪ ಕಾಲಾವಕಾಶ ನೀಡಿದ್ದೇನೆ. ಮಾನ್ಯ ಶಿವರಾಮುರವರೇ, ತಾವು ಪ್ರಶ್ನೆಯನ್ನು ಕೇಳಬಹುದು.

ಶ್ರೀ ಬಿ. ಶಿವರಾಮು :— ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ವಿಷಯದ ಬಗ್ಗೆ ಸದನದಲ್ಲಿ ದೀರ್ಘವಾಗಿ ಚರ್ಚೆಯಾಗಿ ಆಗಿರುವ ತಾರತಮ್ಯವನ್ನು ಬಗೆಹರಿಸುತ್ತೇವೆಂದು ಸರ್ಕಾರ ಆಶ್ವಾಸನೆ ನೀಡಿತ್ತು. ಅದಕ್ಕನುಗುಣವಾಗಿ ಇವತ್ತು ತಾರತಮ್ಯ ಹೋಗಲಾಡಿಸುವಂತೆ ಮನೆಗಳನ್ನು ಹಂಚಿಕೆಮಾಡಲಾಗಿದೆ ಎಂಬ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿದೆ. ನನಗೆ ಬಹಳ ಸಂತೋಷವಾಯಿತು. ಈಗ ಇನ್ನೊಂದು ರೀತಿಯ ತಾರತಮ್ಯವನ್ನು ಹೋಗಲಾಡಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ವಸತಿ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ನಾನು ಪ್ರತಿನಿಧಿಸುವಂತಹ ಕೆಲವೊಂದು ವಿಧಾನಸಭಾ ಕ್ಷೇತ್ರಗಳಿಗೆ ತಾಲ್ಲೂಕು ಕೇಂದ್ರಗಳು ಇರುವುದಿಲ್ಲ. ಮನೆಗಳ ಹಂಚಿಕೆಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಮತ್ತು ನಗರ ಪ್ರದೇಶಗಳಿಗೆ ಇಂತಿಷ್ಟು ಎಂದು ಹಂಚಿಕೆ ಮಾಡುವ ವ್ಯವಸ್ಥೆ ಇದೆ. ನನ್ನಂತಹ ವಿಧಾನಸಭಾ ಕ್ಷೇತ್ರಗಳಿಗೆ ಕೇವಲ ಗ್ರಾಮೀಣ ಪ್ರದೇಶಗಳಿಗೆ ಹಂಚಿಕೆ ಮಾಡುವ ಮನೆಗಳಷ್ಟೇ ದೊರೆಯುತ್ತವೆ. ಆದರೆ ಬೇರೆ ಇತರ ಕ್ಷೇತ್ರಗಳಿಗೆ ನಗರ ಮತ್ತು ಗ್ರಾಮಾಂತರ ಪ್ರದೇಶದ ಕೋಟಾಗಳೆರಡರಲ್ಲೂ ಮನೆಗಳು ಹಂಚಿಕೆಯಾಗಿ ಸಹಜವಾಗಿ ಅವರಿಗೆ ಹಂಚಿಕೆಯಾಗುವ ಮನೆಗಳ ಸಂಖ್ಯೆ ಜಾಸ್ತಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಕ್ಷೇತ್ರದ ವ್ಯಾಪ್ತಿಗೂ ಸಮಾನವಾಗಿ ಮನೆಗಳ ಹಂಚಿಕೆಯಾಗಬೇಕೆನ್ನುವ ದೃಷ್ಟಿಯಿಂದ ಗ್ರಾಮಾಂತರ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಿಗೆ ಹೆಚ್ಚಿಗೆ ಮನೆಗಳನ್ನು ಹಂಚಿಕೆ ಮಾಡಿ ಈ ತಾರತಮ್ಯವನ್ನು

ಬಗೆಹರಿಸಬೇಕೆಂದು ನಾನು ಮಾನ್ಯ ವಸತಿ ಸಚಿವರನ್ನು ತಮ್ಮ ಮೂಲಕ ಕೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :— ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣಕ್ಕೆ ಶೇಕಡ 50 ರಷ್ಟು ಸಬ್ಸಿಡಿ ಮತ್ತು ಶೇಕಡ 50ರಷ್ಟು ಸಾಲದ ರೂಪದಲ್ಲಿ ಹಣವನ್ನು ಕೊಡಲಾಗುತ್ತಿದೆ. ಆದರೆ ನಗರ ಪ್ರದೇಶಗಳಲ್ಲಿ ನೂರಕ್ಕೆ ನೂರರಷ್ಟು ಸಾಲದ ರೂಪದಲ್ಲಿ ಕೊಡುತ್ತಿದ್ದೇವೆ. ಇವರಿಗೆ ಯಾವ ಸಬ್ಸಿಡಿಯನ್ನೂ ಸಹ ಕೊಡುವುದಿಲ್ಲ. ಫಲಾನುಭವಿಗಳು ಐದು ಸಾವಿರ ರೂ.ಗಳನ್ನು ಭರಿಸಿದರೆ ಬಾಕಿ 25 ಸಾವಿರ ರೂ.ಗಳನ್ನು ಸಾಲವಾಗಿ ಕೊಡಲಾಗುತ್ತಿದೆ. ಆದುದರಿಂದ ಇದರಲ್ಲಿ ಏನೂ ವ್ಯತ್ಯಾಸ ಬರುವುದಿಲ್ಲ. ಈ ಮನೆಗಳ ಹಂಚಿಕೆಯ ತರಲೆ, ತಾಪತ್ರಯವೇ ನನಗೆ ಬೇಡವೆಂದು ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಯಾರಿಗೆ ಬೇಕೋ ಅವರಿಗೆ ಮನೆಗಳ ಹಂಚಿಕೆ ಮಾಡಲಿ ಎಂದು ಸಚಿವ ಸಂಪುಟ ಸಭೆಗೆ ಟಿಪ್ಪಣಿಯೊಂದನ್ನು ಕಳುಹಿಸಿದ್ದೆ. ನಾನು ಮನೆಗಳ ಹಂಚಿಕೆ ಮಾಡುವುದರಿಂದ ತಾನೇ ನನ್ನ ಮೇಲೆ ಭ್ರಷ್ಟಾಚಾರ ಅಥವಾ ಇತರ ಅಪಾದನೆಗಳು ಬರುವುದು. ಆದ್ದರಿಂದ ನನಗೆ ಇದರ ಸಹವಾಸವೇ ಬೇಡ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮನೆಗಳ ಹಂಚಿಕೆ ಅಧಿಕಾರ ನೀಡಿ ಸಚಿವ ಸಂಪುಟ ಸಭೆಗೆ ಟಿಪ್ಪಣಿಯೊಂದನ್ನು ಕಳುಹಿಸಿದ್ದೆ. ಅದರಂತೆ ನಿನ್ನೆ ತೀರ್ಮಾನವಾಗಿದೆ. ನನಗೆ ಬಹಳ ಸಂತೋಷವಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರೇ ನನಗೆ ಈ ತರಲೆ ತಾಪತ್ರಯ ಬೇಡ ಎಂದು ವಿಧಾನ ಸಭೆಯಲ್ಲಿ ಬಹಿರಂಗವಾಗಿ ಹೇಳಿದರೆ ಹೇಗೆ?....

ಶ್ರೀ ಸಿ.ಎಂ. ಲಿಂಗಪ್ಪ :— ಮಾನ್ಯ ಸಚಿವರೇ, ಇದುವರೆಗೂ ತಾವೇನು ಮನೆಗಳ ಹಂಚಿಕೆ ಮಾಡಿದ್ದೀರಿ, ಇದು ನಿಮಗೆ ತೃಪ್ತಿ ತಂದಿದೆಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ :— ಸಂಬಂಧಪಟ್ಟ ಖಾತೆ ಸಚಿವರು ಈ ತರಲೆ ತಾಪತ್ರಯ ನನಗೆ ಬೇಡ ಎಂದು ಈ ಸಭೆಯಲ್ಲಿ ಹೇಳಿದರೆ, ನಾವು ಯಾರಿಗೆ ಕೇಳಬೇಕು? ನೀವು ಮುಖ್ಯಮಂತ್ರಿಗಳಿಗಾದರೂ ಕೊಡಿ, ಯಾರಿಗಾದರೂ ಕೊಡಿ ಅದು ನಿಮ್ಮ ವ್ಯವಸ್ಥೆ.

ಶ್ರೀ ಹೆಚ್.ಡಿ. ರೇವಣ್ಣ :— ನಾನು ಈ ಸಮಸ್ಯೆಯನ್ನು ಮುಖ್ಯಮಂತ್ರಿಯವರಿಗೆ ತಿಳಿಸುತ್ತೇನೆ.

ಶ್ರೀ ಬಿ. ಶಿವರಾಮು :— ಸಹಾಯಧನದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಕೊಡುತ್ತೇವೆ, ಸಾಲದ ರೂಪದಲ್ಲಿ ಪಟ್ಟಣಗಳಿಗೆ ಮತ್ತು ನಗರಗಳಿಗೆ ಕೊಡುತ್ತೇವೆಂದು ಹೇಳಿದರು.

ನೀವು ಯಾವುದೇ ರೂಪದಲ್ಲಿ ಕೊಡಿ, ತಾರತಮ್ಯ ಇಲ್ಲದೆ, ರಾಜ್ಯದ ಎಲ್ಲಾ 224 ಕ್ಷೇತ್ರಗಳಿಗೂ ಮನೆಗಳ ಹಂಚಿಕೆಯಾಗಲಿ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಕ್ಷೇತ್ರಗಳು ನಮ್ಮಂತಹ ಕೆಲವು ಇವೆ, ತಾಲ್ಲೂಕು ಕೇಂದ್ರಗಳು ಇರುವುದಿಲ್ಲ. ಇಲ್ಲಿ ತಾಲ್ಲೂಕು ಕೇಂದ್ರಗಳು ಇರತಕ್ಕಂತಹ ಕ್ಷೇತ್ರಗಳಿಗೆ ಗ್ರಾಮಾಂತರ ಪ್ರದೇಶಗಳಿಂದಲೂ ಮನೆಗಳು ಬರುತ್ತವೆ, ನಗರ ಪ್ರದೇಶದ ಯೋಜನೆಯ ಮನೆಗಳೂ ಬರುತ್ತವೆ. ಆಗ ಅಲ್ಲಿ ಸಂಖ್ಯೆ ಹೆಚ್ಚಾಗುತ್ತದೆ. ನಾನು ಅದಕ್ಕೆ ಒಂದು ನಿದರ್ಶನ ಇಟ್ಟುಕೊಂಡು ಹೇಳಿದೆ. ಆ ರೀತಿಯ ತಾರತಮ್ಯ ಆಗತಕ್ಕಂಥದ್ದರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ತಾಲ್ಲೂಕು ಕೇಂದ್ರಗಳಿಗೆ ಹೆಚ್ಚು ಮನೆಗಳನ್ನು ಕೊಡುವುದರ ಮೂಲಕ ತಾರತಮ್ಯ ಬಗೆಹರಿಸಬೇಕು ಎಂದು ನಾನು ಅವರಿಗೆ ಹೇಳಿದ್ದು.

ಶ್ರೀ ಹೆಚ್.ಡಿ. ರೇವಣ್ಣ :— ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇವೆ. ಅವರು ಎಷ್ಟು ಕೊಡುತ್ತಾರೆ ಕೊಡಲಿ.

ಅರಕಲಗೂಡು ತಾಲ್ಲೂಕು ಚಿಕ್ಕಳ್ಳಿ ಗ್ರಾಮದ ನಿವೇಶನದ ಅಭಿವೃದ್ಧಿಗಾಗಿ ಇಡಲಾದ ಹಣದ ದುರುಪಯೋಗ.

51(450) ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅರಕಲಗೂಡು ತಾಲ್ಲೂಕ್ ಚಿಕ್ಕಳ್ಳಿ ಗ್ರಾಮದ ಸ.ನಂ. 141 : 2ರಲ್ಲಿ ಎರಡೆರಡು ಬಾರಿ ನಿವೇಶನ ಅಭಿವೃದ್ಧಿಪಡಿಸಲು ಹಣ ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಉದ್ದೇಶಕ್ಕಾಗಿ ಖರ್ಚು ಮಾಡಿದ ಒಟ್ಟು ಹಣ ಎಷ್ಟು;

ಇ) ಇದರಲ್ಲಿ ಹಣ ದುರುಪಯೋಗ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ದುರುಪಯೋಗ ಆದ ಹಣ ಎಷ್ಟು ಮತ್ತು ಹಣ ದುರುಪಯೋಗ ಮಾಡಿದ ಅಧಿಕಾರಿಗಳ ವಿರುದ್ಧ ಸರಕಾರ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಬಂದಿದೆ.

ಆ) ರೂ. 38,450.00

ಇ) ಬಂದಿದೆ.